ನೋಟಿಫಿಕೇಷನ್.

ತಾರೀಖು 26ನೆ ಜನವರಿ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೆಳಗೆ ಕಂಡ ಡಿಪೋಗಳಲ್ಲಿ ಚೌಬೀನೆಯನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸುತ್ತೆ.

ನಂ.	ಡಿಪೋಗಳ ಹೆಸರು.	ಹರಾಜು ತಾರೀಖು.	ನಾಟಾಗಳ ವಿವರ.	ನಲೆ ಅಡಿ.		ಷರಾ.
				ನಂಬರ್.	ಅಡಿ.	
1	ಮೈಸೂರು ಉಡಿಯಾರ್ಡ್	25—2—07	ಮತ್ತಿನಾಟಾ	50	1,000	ಹೆಚ್ಚಿನ ಷರತ್ತು.
			ಸಾಗ್ವಾನಿನಾಟಾ	650	25,000	
			ಡಿಟೋ ತುಂಡುಗಳು	400	5,000	
			ಹೊನ್ನೆನಾಟಾ	50	1,000	
2	ನಂಜನಗೂಡು ಡಿಪೋ	26—2—07	ಸಾಗ್ವಾನಿನಾಟಾ	150	4,000	
			ಡಿಟೋ ತುಂಡುಗಳು	150	3,000	
			ಹೊನ್ನೆನಾಟಾ	100	1,500	
			ಬೀಜೆನಾಟಾ	100	1,500	

ಹರಾಜು ಷರತ್ತು :—1895ನೆ ಇಸವಿ ಏಪ್ರಿಲ್ ತಾರೀಖು 23ನೆ ಮುರ್ಕುಂ 15ನೆ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚಿ 15ನೆ ಮುರ್ಕುಂ ನಂಬರ್ 15229—R. F. 155—92ನೆ ನೋಟಿಫಿಕೇಷನ್ ನೋಡಬೇಕು.

ಎಂ. ಜಿ. ರಾಮರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್.

ನೋಟಿಸ್.

ಇದರಿಂದ ತಿಳಿಯಪಡಿಸುವದೇನಂದರೆ :—1907ನೆ ಇಸವಿ ಫೆಬ್ರವರಿ 23ನೆ ತಾರೀಖಿನ ದಿವಿ 11 ಘಂಟೆಗೆ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ಡಿವೀರ್ಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ತುರ್ವೇಕೆರೆ ಸಬ್ ತಾಲ್ಲೂಕಿನಲ್ಲಿ ಇರುವ ಜೋಡಿ ಹರಿಜನ ಹಳ್ಳಿ ಗ್ರಾಮವನ್ನು ಸರಕಾರಕ್ಕೆ ಬರಬೇಕಾದ ರೆವಿನ್ಯೂ ಕಂದಾಯದ ಬಾಕಿಗೋಸ್ಕರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

N. B.—ಹೆಚ್ಚಿಗೆ ವಿಷಯಕ್ಕಾಗಿ 1907ನೆ ಇಸವಿ ಜನವರಿ 17ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 15—16ನೆ ಸಂಪ್ರಟಗಳಲ್ಲಿ ನಮೂದಿರುತ್ತೆ.

ಎಂ. ಶ್ರೀನಿವಾಸಮೂರ್ತಿ,
ಫಾರ್ ಡಪ್ಯೂಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 5ನೆ ಜನವರಿ 1907.

ಸಕಲ ಜನಗಳಿಗೂ ತಿಳಿಯುವೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಅದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮೂಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ಸಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮುಂಜಾಗ್ರತೆಮಲ್ಲಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪ್ರಾರಾ ಗ್ರಾನುಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯ್ತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜವಿನಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಮರುಹರಾಜು ಹಾಕಲ್ಪಡುವವು.